# ವಾರಿಯರ್ಸ್ ತಂಡ ಪ್ರಕಟ

ಮೈಸೂರು ಮೂಲದಾಗಿದ್ದು, ಈ ಭಾಗದ ಪ್ರತಿಭೆಗಳನ್ನು ಗುರುತಿಸಿ ಉತ್ತೇಜನ ನೀಡುತ್ತಿರುವುದಕ್ಕೆ ಸಂತಸವಾಗಿದೆ. ಮುಂದೆ 3-5 ವರ್ಷಗಳಲ್ಲಿ ತಂಡದ ಕನಿಷ್ಟ ಇಬ್ಬರು ರಾಷ್ಟ್ರೀಯ ಕ್ರಿಕೇಟ್ ತಂಡ ಪ್ರತಿನಿಧಿಸಬೇಕೆಂಬುದು ನಮ್ಮ ಗುರಿಯಾಗಿದೆ-ಎಂದರು.

ತಂಡದಲ್ಲಿ ನಾಲ್ವರು ಬೌಲರ್ ಗಳು, ಐವರು ಬ್ಯಾಟ್ಸ್ ಮನ್ ಗಳು ಮತ್ತು 8 ಮಂದಿ ಆಲ್ ರೌಂಡರ್ ಗಳು ಇದ್ದು ತಂಡವು ಕೆಪಿಎಲ್ ಪಂದ್ಯಾವಳಿಯಲ್ಲಿ ಬೆರಗು ಮೂಡಿಸುವ ವಿಶ್ವಾಸವಿದೆ. ಇದರ ಜೊತೆಗೆ ಅತ್ಯುತ್ತಮ ಸಿಬ್ಬಂದಿಯನ್ನು ತಂಡ ಹೊಂದಿದೆ. ಅಸಿಸ್ಟೆಂಟ್ ಕೋಚ್ ಮಧ್ಯಾಳ್ಕರ್ ದೈಹಿಕ ತರಬೇತಿದಾರ ಶ್ಯಾಮ ರಾವ್, ಫಿಜಿಯೋ ಥೆರಫಿಸ್ಟ್ ರಾಘವೇಂದ್ರ, ಕೋಚ್ ಆರ್.ಎಕ್ಸ್ ಮುರುಳಿ, ಅತುಲ್, ಅರುಣ್ ಕುಮಾರ್. ಮ್ಯಾನೇಜರ್ ಸುರೇಶ್, ಅತುಲ್ ರವರ ಮಾರ್ಗದರ್ಶನ ತಂಡಕ್ಕಿದೆ.

ಸಂಪೂರ್ಣವಾಗಿ ಹೊಸಬರನ್ನು ಒಳಗೊಂಡ 20 ಮಂದಿ ಸದಸ್ಯ ತಂಡದಲ್ಲಿ 18 ಮಂದಿ ವಿವಿಧ ಹಂತಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದು, ಇಬ್ಬರನ್ನು ವಿವಿಧ ಹಂತದ ಪ್ರತಿಭಾನ್ವೇಷಣೆ ಕಾರ್ಯದ ನಂತರ ಆಯ್ಕೆ ಮಾಡಲಾಯಿತು ಎಂದರು.

ತಂಡದಲ್ಲಿ ಅಮಿತ್ ವರ್ಮಾ, ಮನಿಶ್ ಪಾಂಡೆ, ಶಿಶಿರ್ ಭವಾನೆ, ಕೆ.ಬಿ.ಪವನ್, ಸುಚಿತ್, ಸಾದಿಕ್ ಕೀರ್ಮಾನಿ(ವಿಕೆಟ್ ಕೀಪರ್), ಆದಿತ್ಯ ಸಾಗರ್, ಯರೇಗೌಡ, ಎಂ.ಬಿ.ದರ್ಶನ್, ರಾಜು ಭಟ್ಕಳ್, ಮಂಜುನಾಥ್ ಎಸ್.ಪಿ, ಮಂಜೇಶ್ ರೆಡ್ಡಿ, ಅಬ್ದುಲ್ ಮಜೀದ್, ವೈಶಾಕ್ ವಿಜಯ್ ಕುಮಾರ್, ಸೋಮಶೇಖರ್, ಶಶಿ ಶೇಖರ್, ಸುನಿಲ್ ಕುಮಾರ್ ಇದ್ದಾರೆ.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಛೇರ್ ಮನ್ ಸುಧಾಕರ್ ರಾವ್, ಎನ್.ಆರ್.ಗ್ರೂಪ್ ಛೇರ್ ಮನ್ ಆರ್.ಗುರು, ಕನ್ವಿನಿಯರ್ ಕೆ.ಎಸ್.ಬಾಲಚಂದ್ರ, ಎ.ವಿ.ಶಶಿಧರ್ ಹಾಜರಿದ್ದರು.